# ಅನಾಥ ಮೊಟ್ಟೆಗಳು

ನಮ್ಮ ಮನೆ ಹಿಂದಿರುವ ಗಿಡವೊಂದಕ್ಕೆ ಹಕ್ಕಿ ಗೂಡು ಕಟ್ಟಿ ಮೂರು ಮೊಟ್ಟೆಗಳನ್ನಿಟ್ಟಿತ್ತು. ಎರಡೂ ಚಿಕ್ಕ ಚಿಕ್ಕ ಹಕ್ಕಿಗಳೇ, ಒಂದು ಹಕ್ಕಿ ಗೂಡಿನಲ್ಲಿದ್ದರೆ ಮತ್ತೊಂದು ಹೊರಗಿರುತ್ತಿತ್ತು. ಹೀಗೆ ಎಡಬಿಡದೆ ಹಕ್ಕಿಗಳ ಹಾರಾಟ ನಡೆಯುತ್ತಿತ್ತು. ಈ ಮಧ್ಯೆ ಶನಿವಾರದಂದು ನಾನು ಊರಿಗೆ ಹೋದೆ. ಸೋಮವಾರ ಬಂದು ಮನೆ, ಕಚೇರಿ ಕೆಲಸದಲ್ಲಿ ಮಗ್ನಳಾಗಿ ಹಕ್ಕಿಗೂಡು ನೆನಪಿಗೆ ಬರಲಿಲ್ಲ. ಮಂಗಳವಾರ ಬೆಳಿಗ್ಗೆಯಿಂದಲೇ ಹಕ್ಕಿಗಳ ಹಾರಾಟ ಚಿಲಿಪಿಲಿ ಯಾವೊಂದು ಕಾಣಲಿಲ್ಲ. ಗೂಡಲ್ಲಿ ಮೊಟ್ಟೆ ಹಾಗೇ ಇತ್ತು. ಹಕ್ಕಿಗಳು ಬರಲೇ ಇಲ್ಲ. ಏನಾದವೋ ತಿಳಿಯಲಿಲ್ಲ. 4–5 ದಿನಗಳ ನಂತರ ಮೊಟ್ಟೆ ಕೊಳೆತು ಒಡೆದು ಹೋಯಿತು. ಹಕ್ಕಿಗಳು ಯಾಕೆ ಮೊಟ್ಟೆ, ಗೂಡನ್ನು ತ್ಯಜಿಸಿ ಹೋದವೋ!

**-ಶಶಿರೇಖಾ ನಾಗೇಂದ್ರ, ತುಮಕೂರು**



# ಗಿಳಿವಿಂಡಿನ ಕಲರವ

ರಾಷ್ಟ್ರಕವಿ ಗೋವಿಂದ ಪೈಗಳು ಬದುಕಿನ ಬಹುಭಾಗ ಕಳೆದದ್ದು ಮತ್ತು ಸಾಹಿತ್ಯ ಕೃಷಿ ಮಾಡಿದ್ದು ಮಂಜೇಶ್ವರದ ಮಣ್ಣಿನಲ್ಲಿ. ಅಲ್ಲಿಯ ಅನಂತೇಶ್ವರ ದೇವಳ ಅವರ ಆಧ್ಯಾತ್ಮಿಕ ನೆಲೆಯಾಗಿತ್ತು. ಮನೆಯ ಉಪ್ಪರಿಗೆಯ ಕೋಣೆಯಲ್ಲಿ ಕುಳಿತು ಭೋರ್ಗರೆವ ಸಮುದ್ರ, ಪಡುವಣದಲ್ಲಿ ಮುಳುಗುವ ಸೂರ್ಯನನ್ನೇ ನೋಡುತ್ತಾ ಸಾಹಿತ್ಯ ರಚನೆ ಮಾಡುವುದು



ಅವರಿಗೆ ತುಂಬ ಇಷ್ಟವಾದ ವಿಷಯವಾಗಿತ್ತು.

ತಮ್ಮ ಮನೆಗೆ ಬರುತ್ತಿದ್ದ ವಿದ್ವಾಂಸರು, ಸಾಹಿತಿಗಳನ್ನು ಪೈ ದಂಪತಿಗಳು ಆತ್ಮೀಯವಾಗಿ ಸತ್ಕರಿಸುತ್ತಿದ್ದರು. ಕನ್ನಡದ ಲೇಖಕರಿಗೆಲ್ಲ ಅವರ ಮನೆ ಯಾತ್ರಾಸ್ಥಳದಂತೆ ಆಗಿತ್ತು. ಹಳೆಯ ಕಾಲದ ಸುಂದರ ಮುಖಮಂಟಪ ಇದ್ದ ಕವಿ ನಿವಾಸ ಅವರ ನಿಧನಾನಂತರ ಪಾಳುಬಿದ್ದು ಹೋಯಿತು. ತೀರಾ ಇತ್ತೀಚೆಗೆ ಅಭಿಮಾನಿಗಳ ಮುತುವರ್ಜಿಯಿಂದ ಕೇರಳ–ಕರ್ನಾಟಕ ಸರಕಾರಗಳ ಜಂಟಿ ಆರ್ಥಿಕ ಸಹಯೋಗದಿಂದ ತನ್ನ ಪಾರಂಪರಿಕ ಸೊಗಸನ್ನು ಉಳಿಸಿಕೊಂಡೇ ಗತವೈಭವವನ್ನು ಮರಳಿಪಡೆದಿದೆ.

ಗಿಳಿವಿಂಡು (ಗಿಳಿಗಳ ಸಮೂಹ) ಎಂಬ ಗೋವಿಂದ ಪೈಗಳ ಪ್ರಸಿದ್ಧ ಕವನ ಸಂಕಲನದ ಅರ್ಥಪೂರ್ಣ ಹೆಸರು ಪಡೆದಿರುವ ಈ ಸಾಂಸ್ಕೃತಿಕ ಕೇಂದ್ರದಲ್ಲಿ ಭವನಿಕಾ ಸಭಾಗೃಹ, ಯಕ್ಷ ದೇಗುಲ, ಪಾರ್ತಿಸುಬ್ಬ ಬಯಲು ರಂಗ ಮಂದಿರ, ಸಾರಸ್ವತ ಗ್ರಂಥ ಭಂಡಾರ, ನಲಂದ ಹೆಸರಿನ ಅಧ್ಯಯನ ಕೇಂದ್ರಗಳಿವೆ. ಬೆಳ್ಳಿ ಮೀಸೆಯ ಗೋವಿಂದ ಪೈಗಳ ಕಂಚಿನ ಪುತ್ಥಳಿ ಮೊಗಸಾಲೆಯಲ್ಲಿ ವಿರಾಜಮಾನವಾಗಿದೆ.

**ಚಿತ್ರ-ಬರಹ: ಡಾ. ವೇಣುಗೋಪಾಲ ಶರ್ಮಾ, ಗುರುವಾಯನಕೆರೆ**

# ಕಲ್ಬಾವಿ!

ಚಳ್ಳಕೆರೆ ತಾಲ್ಲೂಕು ಕೇಂದ್ರದಿಂದ 11 ಕಿ.ಮೀ. ದೂರದಲ್ಲಿರುವ ರಾಮದುರ್ಗದ ಸಮೀಪದ ಹೊಸಗುಡ್ಡದಲ್ಲಿ ಈ ಕಲ್ಲುಬಾವಿಯನ್ನು ಅಖಂಡ ಗುಡ್ಡದ ಕಲ್ಲಿನಲ್ಲಿ ಕೊರೆಯಲಾಗಿದ್ದು, ಇದು ಅಜಮಾಸು 12X10X7 ಘನ ಅಡಿಯಲ್ಲಿದೆ. ಗುಡ್ಡದ ಮೇಲಿನ ಕೋಟೆಯ ಒಳಗೆ ಬೀಳುವ ಮಳೆ ನೀರನ್ನು ಇದರಲ್ಲಿ ಸಂಗ್ರಹಿಸಿ ಬಳಕೆಗೆ ಬರುವಂತೆ ಮಾಡಿರುವುದು ಅಂದಿನ ಹಟ್ಟಿ (ನಾಯಕನ ಹಟ್ಟಿ) ಪಾಳೆಯಗಾರರ ಶಿಲ್ಪಿಗಳ ಕೈಚಳಕವಾಗಿದೆ. ಇದೇ ರೀತಿಯ ಇನ್ನೊಂದು ಬಾವಿಯೂ ಪಕ್ಕದಲ್ಲೇ ಇದ್ದು, ಇವುಗಳ ಹಿಂಭಾಗದ ಕೆಳಗೆ ಶ್ರೀರಾಮ ಲಿಂಗೇಶ್ವರ ಗುಹಾಂತರ ದೇವಾಲಯವಿದೆ. ಇದು ಚಾಲುಕ್ಯರ ಬಾದಾಮಿಯ ಕಿರುನಕಲೆಂಬುದು ಇತಿಹಾಸ ತಜ್ಞರ ಅಂಬೋಣ. ಈ ಕಲ್ಬಾವಿಯಲ್ಲಿ ಈಗಲೂ ನೀರು ಸಂಗ್ರಹವಾಗುತ್ತದೆ.

**-ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ**

